ಓ.ಎಸ್. ನಂಃ 4/2014

ಡಿ. ಡಬ್ಲ್ಯೂಃ 1

**ದಿನಾಂಕ 17.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಂ.ಬಿ ವಕೀಲರಿಂದಃ**

1. ಪ್ರತಿವಾದಿ ಸಂಖ್ಯೆ 6(ಎ) ರವರು ಆರೋಗ್ಯವಂತರಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಸಂಖ್ಯೆ 6(ಎ) ರವರಿಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಹಾಗೂ ಕೇವಲ ತಮ್ಮ ಸಹಿ ಹಾಕಲು ಮಾತ್ರ ಬರುತ್ತದೆ. ಪ್ರತಿವಾದಿ ಸಂಖ್ಯೆ 6(ಎ) ರವರಿಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ. ಪ್ರತಿವಾದಿ ಸಂಖ್ಯೆ 6(ಎ) ರವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವಷ್ಟು ಪ್ರಬಲರಾಗಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ಸಂಖ್ಯೆ 6(ಎ) ರವರಿಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿ ಸಂಖ್ಯೆ 6(ಎ) ರವರಿಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎನ್ನುವ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

2. ಪ್ರತಿವಾದಿ ಸಂಖ್ಯೆ 6(ಎ) ರವರ ತಂಗಿ ಇರುವುದಿಲ್ಲ ಆದರೆ ಅವರಿಗೆ ಅಕ್ಕ ಮತ್ತು ಅಣ್ಣ ಇರುತ್ತಾರೆ. ಪ್ರತಿವಾದಿ ಸಂಖ್ಯೆ 6(ಎ) ರವರ ಅಣ್ಣನ ಹೆಸರು ವೀನಾಕ್ಷಿ ಅಂತ ಇದ್ದು, ಅವರ ಅಣ್ಣನ ಹೆಸರು ವೆಂಕಟರಾಮೇಗೌಡ ಅಂತ ಇರುತ್ತದೆ. ನಾನು ಪ್ರತಿವಾದಿ ಸಂಖ್ಯೆ 6(ಎ) ರವರ ಅಣ್ಣನಾದ ವೆಂಕಟರಾಮೇಗೌಡರ ಖಾಸ ಮಗ ಎಂದರೆ ಸರಿ. ಪ್ರತಿವಾದಿ ಸಂಖ್ಯೆ 6(ಎ) ರವರು ನನ್ನ ಖಾಸ ತಾಯಿ ಅಲ್ಲ ಆದರೆ ದತ್ತು ಪಡೆದ ತಾಯಿಯಾಗಿರುತ್ತಾರೆ. ನನ್ನ ಸ್ವಂತ ತಾಯಿಯ ಹೆಸರು ಶಿವಮ್ಮ ಅಂತ ಇರುತ್ತದೆ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ತಂದೆಯ ಹೆಸರು ದೊಡ್ಡಸಿದ್ದೇಗೌಡ ಅಂತ ಬರೆಸಿರುತ್ತೇನೆ ಎಂದರೆ ಸರಿ. ಪ್ರತಿವಾದಿ ಸಂಖ್ಯೆ 6(ಎ) ಮತ್ತು ಅವರ ಗಂಡ 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರಿಗೆ ಮಕ್ಕಳಾಗಿರಲಿಲ್ಲ ಎಂದರೆ ಸರಿ. ನಾನು 10-12 ವರ್ಷದ ಹುಡುಗನಿದ್ದಾಗಲೇ ಪ್ರತಿವಾದಿ ಸಂಖ್ಯೆ 6(ಎ) ರವರ ಮನೆಗೆ ಹೋಗಿರುತ್ತೇನೆ. ಪ್ರತಿವಾದಿ ಸಂಖ್ಯೆ 6(ಎ) ಮತ್ತು ಅವರ ಗಂಡ 6 ನೇ

ಪ್ರತಿವಾದಿಯಾದ ದೊಡ್ಡಸಿದ್ದೇಗೌಡ ನನ್ನನ್ನು ಕಾನೂನಿನ ಪ್ರಕಾರ ದತ್ತು ಪಡೆದಿರುವುದಿಲ್ಲ ಎಂದರೆ ಸರಿ.

4. ನನಗೆ ವಾದಿಯರ ಮತ್ತು ಅವರ ತಂದೆಯಾದ ಮರೀಗೌಡರ ಪರಿಚಯವಿದೆ. ವಾದಿಯರ ತಂದೆಯಾದ ಮರೀಗೌಡರು ಮತ್ತು 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಇವರಿಬ್ಬರು ಖಾಸ ಅಣ್ಣತಮ್ಮಂದಿರು ಎಂದರೆ ಸರಿ. ಸದರಿ ಮರೀಗೌಡ ಮತ್ತು ದೊಡ್ಡಸಿದ್ದೇಗೌಡರ ತಂದೆಯ ಹೆಸರು ದೊಡ್ಡಹುಚ್ಚೇಗೌಡ ಅಂತ ಇರುತ್ತದೆ. ಸದರಿ ದೊಡ್ಡ ಹುಚ್ಚೇಗೌಡರಿಗೆ 6 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅಂತ ಒಟ್ಟು 9 ಜನ ಮಕ್ಕಳಿರುತ್ತಾರೆ. ಈ ದಾವೆಯ ವಾದಿಯರು ಸದರಿ ಮರೀಗೌಡ ಬಿನ್ ದೊಡ್ಡಹುಚ್ಚೇಗೌಡರ ಮಕ್ಕಳು ಎಂದರೆ ಸರಿ.

5. ಈ ದಾವೆಯನ್ನು ವಾದಿಯರು ಯಾವ ಪರಿಹಾರ ಕೋರಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಖರೀದಿಸಿರುವ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯ ತಂದೆಯಾದ ಮರೀಗೌಡರು ಹಾಗೂ ವಾದಿಯರ ತಾತನಾದ ದೊಡ್ಡಹುಚ್ಚೇಗೌಡರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

6. ದಾವಾ ಸಿ ಮತ್ತು ದಾವಾ ಡಿ ಅನುಸೂಚಿ ಆಸ್ತಿಗಳನ್ನು ನಿಡಿ.2 ರಡಿಯಲ್ಲಿ 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಖರೀದಿ ಮಾಡಿದ್ದಾಗಲೇ ನನಗೆ ಸದರಿ ಖರೀದಿ ಮತ್ತು ಖರೀದಿ ಪತ್ರಗಳ ಬಗ್ಗೆ ಮಾಹಿತಿ ಇತ್ತು. ನನ್ನ ಜನ್ಮ ದಿನಾಂಕ 01.12.1975 ಇರುತ್ತದೆ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳು ವಾದಿಯರ ತಾತನಾದ ದೊಡ್ಡಹುಚ್ಚೇಗೌಡರಿಂದ ವಾದಿಯರ ತಂದೆಯಾದ ಮರೀಗೌಡರಿಗೆ ಬಂದಿರುವ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಖರೀದಿ ಮಾಡುವ ಕಾಲಕ್ಕೆ ನಾನು ಅವರ ಜೊತೆ ವಾಸವಿದ್ದೆ ಎಂದು ತೋರಿಸಲು ನನ್ನ ವಾಸಸ್ಥಳ ದೃಡಿಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

7. ನಾನು ಚಂದಗಾಲು ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಸವರಾಜಪುರದಲ್ಲಿ ವಾಸವಿದ್ದೇನೆ ಎಂದು ಸ್ವತಃ ನುಡಿದಿರುತ್ತಾರೆ.

ನನ್ನ ಖಾಸ ತಂದೆ ಮತ್ತು ತಾಯಿಯಾದ ಶಿವಮ್ಮ ಹಾಗೂ ವೆಂಕಟರಾಮೇಗೌಡರ ಸ್ವಂತ ಊರು ಚಂದಗಾಲು ಎಂದರೆ ಸರಿ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳು ವಾದಿಯ ತಂದೆಯಾದ ಮರೀಗೌಡರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು ದೊಡ್ಡಹುಚ್ಚೇಗೌಡರ ಮಕ್ಕಳು ಪಾಲುವಿಭಜನೆ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

8. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಖರೀದಿಸಿರುತ್ತಾರೆ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ನನಗೆ ಕೇವಲ 15 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳು ವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿರುವ ಕಾರಣ ನಿಡಿ.2 ಮತ್ತು 3 ರ ಖರೀದಿಪತ್ರಗಳು ಕಾನೂನುಬಾಹಿರವಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳು ವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳಲ್ಲಿ ವಾದಿಯರಿಗೂ ಸಹ ಸಮಾನ ಪಾಲು ಇದೆ ಎಂದು ಗೊತ್ತಿದ್ದರೂ ಸಹ ವಾದಿಯರ ಪಾಲನ್ನು ಮೊಟಕುಗೊಳಿಸುವ ಉದ್ದೇಶದಿಂದ 1 ರಿಂದ 3 ನೇ ಪ್ರತಿವಾದಿಯರೊಂದಿಗೆ ಶಾಮೀಲಾಗಿ ನಿಡಿ.2 ಮತ್ತು 3 ಖರೀದಿ ಪತ್ರದ ಮೂಲಕ 6 ನೇ ಪ್ರತಿವಾದಿ ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

9. ವಾದಿಯರು ಕನುಗನಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ದಾವಾ ಸಿ ಮತ್ತು ಡಿ ಅನುಸೂಚಿ ಆಸ್ತಿಗಳನ್ನು ವಾದಿಯರ ಗಮನಕ್ಕೆ ಬರದ ಹಾಗೆ 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡುವ ಪ್ರಮೇಯ ಇರಲಿಲ್ಲ ಎಂದು ನುಡಿದಿರುತ್ತಾರೆ.

10. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ದಿಃ 02.12.2013 ರಂದು ವಾದಿಯರು ಊರಿನ ಮುಖಂಡರ ಸಮಕ್ಷಮದಲ್ಲಿ ನ್ಯಾಯ ಪಂಚಾಯಿತಿ ಮಾಡಿಸಿ ದಾವಾ ಆಸ್ತಿಗಳಲ್ಲಿ ಪಾಲನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸಿ ಅನುಸೂಚಿ ಆಸ್ತಿಯನ್ನು ವಾದಿಯರಿಗೆ ಬಿಟ್ಟುಕೊಡುವುದಾಗಿ ಸದರಿ ನ್ಯಾಯ ಪಂಚಾಯಿತಿಯಲ್ಲಿ 6 ನೇ ಪ್ರತಿವಾದಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ನಿಡಿ.2 ಮತ್ತು 3 ರ

ದಾಖಲೆಗಳು ವಾದಿಯರಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸಂಖ್ಯೆ 6(ಎ) ರವರು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ನುಡಿದರೆ ಸತ್ಯ ಹೊರಬರುತ್ತದೆ ಎನ್ನುವ ಭಯದಿಂದ ಅವರ ಪರ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಸಂಖ್ಯೆ 6(ಎ) ರವರಿಗೆ ಕಿವಿ ಕೇಳಿಸುವುದಿಲ್ಲ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯ ಬಗ್ಗೆ ಮತ್ತು ದಾವೆಯ ವಿದ್ಯಾಮಾನಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಾನು ಪ್ರತಿವಾದಿ ಸಂಖ್ಯೆ 6 ಮತ್ತು 6(ಎ) ರವರ ದತ್ತು ಪುತ್ರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**

**ಓ.ಎಸ್. ನಂಃ 4/2014**

**ಡಿ. ಡಬ್ಲ್ಯೂಃ 2**

**ದಿನಾಂಕ 17.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃಶ್ರೀ ಎಂ.ಬಿ ವಕೀಲರಿಂದಃ**

1. ನನಗೆ ವಾದಿಯರ ಪರಿಚಯವಿದೆ. ವಾದಿಯರು ಮರೀಗೌಡರ ಮಕ್ಕಳು ಎಂದರೆ ಸರಿ. ನನಗೆ ವಾದಿಯರ ತಂದೆ ಮರೀಗೌಡ ಮತ್ತು 6 ನೇ ಪ್ರತಿವಾದಿಯಾದ ದೊಡ್ಡಸಿದ್ದೇಗೌಡರ ಪರಿಚಯವಿದೆ. ದಾವಾ ಐ ಅನುಸೂಚಿ ಆಸ್ತಿಗೂ ಮತ್ತು ನನಗೂ ಸಂಬಂದವಿಲ್ಲ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರಿಂದ ನಾನು ದಾವಾ ಐ ಅನುಸೂಚಿ ಆಸ್ತಿಯನ್ನು ಖರೀದಿಸಿರುವುದಿಲ್ಲ. ಸರ್ವೆ ನಂಬರ್ 82/5, 83/3 ಮತ್ತು 88/4 ಇವೆಲ್ಲ ವಾದಿಯರ ತಂದೆಯಾದ ಮರೀಗೌಡರ ಕುಟುಂಬಕ್ಕೆ ಸೇರಿದ ಆಸ್ತಿಗಳಲ್ಲ.

2. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ತೋರಿಸಿರುವಂತಹ ನನ್ನ ವಿಳಾಸವು ಸತ್ಯವಾಗಿರುತ್ತವೆ. ನಿಡಿ.35 ರ ಖರೀದಿ ಪತ್ರದಡಿಯಲ್ಲಿ 1 ರಿಂದ 3 ನೇ ಪ್ರತಿವಾದಿಯರಿಂದ ನಾನು ದಾವಾ ಐ ಅನುಸೂಚಿ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಆಸ್ತಿಗಳಲ್ಲಿ ವಾದಿಯರಿಗೆ ಪಾಲು ಇರುವ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**

ಓ.ಎಸ್. ನಂಃ 4/2014

**ಡಿ. ಡಬ್ಲ್ಯೂಃ 3**

**ದಿನಾಂಕ 17.03.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಂ.ಬಿ ವಕೀಲರಿಂದಃ**

1. 9 ನೇ ಪ್ರತಿವಾದಿಯರಾದ ಸಣ್ಣನಿಂಗಮ್ಮ ರವರು ನನ್ನ ತಾಯಿ. ನನಗೆ ವಾದಿಯರ ತಂದೆಯಾದ ಮರೀಗೌಡರ ಪರಿಚಯವಿದೆ. ವಾದಿಯರ ಮರೀಗೌಡರ ಮಕ್ಕಳು ಎಂದರೆ ಸರಿ. ದಾವಾ ಹೆಚ್ ಅನುಸೂಚಿ ಆಸ್ತಿಯನ್ನು 9 ನೇ ಪ್ರತಿವಾದಿ 1981 ರಲ್ಲಿ ಖರೀದಿಸಿರುತ್ತಾರೆ. ನಾನು 1970 ರಲ್ಲಿ ಜನಿಸಿರುತ್ತೇನೆ. ದಾವಾ ಹೆಚ್ ಅನುಸೂಚಿ ಆಸ್ತಿಯನ್ನು 9 ನೇ ಪ್ರತಿವಾದಿ ಖರೀದಿ ಮಾಡಿದ ಕಾಲಕ್ಕೆ ನನಗೆ 10 ವರ್ಷ ವಯಸ್ಸಾಗಿತ್ತು. ದಾವಾ ಹೆಚ್ ಅನುಸೂಚಿ ಆಸ್ತಿಯು ವಾದಿಯರ ತಂದೆಯಾದ ಮರೀಗೌಡರ ಪಿತ್ರಾರ್ಜಿತ ಆಸ್ತಿಯಲ್ಲ ಬದಲಾಗಿ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಹೆಚ್ ಅನುಸೂಚಿ ಆಸ್ತಿಯನ್ನು ಮರೀಗೌಡರು ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ದಾವಾ ಹೆಚ್ ಅನುಸೂಚಿ ಆಸ್ತಿಯು ವಾದಿಯರ ತಂದೆಯಾದ ಮರೀಗೌಡರ ಪಿತ್ರಾರ್ಜಿತ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

2. ದಾವಾ ಹೆಚ್ ಅನುಸೂಚಿ ಆಸ್ತಿಯು ವಾದಿಯರ ತಂದೆಯಾದ ಮರೀಗೌಡರ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆಯೇ ಹೊರತು ಅವರ ಸ್ವಯಾರ್ಜಿತ ಆಸ್ತಿಯಲ್ಲ ಎಂದರೆ ಸರಿಯಲ್ಲ. ದಾವಾ ಹೆಚ್ ಅನುಸೂಚಿ ಆಸ್ತಿಯು ವಾದಿಯರ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ 9 ನೇ ಪ್ರತಿವಾದಿಯು ದಾವಾ ಹೆಚ್ ಅನುಸೂಚಿ ಆಸ್ತಿ ಸಂಬಂದ ಮಾಡಿಕೊಂಡ ನಿಪಿ.36 ರ ಖರೀದಿ ಪತ್ರವು ಕಾನೂನಿಡಿಯಲ್ಲಿ ಅಸಿಂಧುವಾಗಿರುತ್ತದೆ ಎಂದರೆ ಸರಿಯಲ್ಲ.

3. ಪ್ರತಿವಾದಿ ಸಂಖ್ಯೆ 9(ಎ) ರವರು ವಯಸ್ಸಿನಲ್ಲಿ ನನ್ನಕ್ಕಿಂತ ಹಿರಿಯರಾಗಿರುತ್ತಾರೆ ಎಂದರೆ ಸರಿ. ನಿಪಿ.36 ರ ಖರೀದಿ ಪತ್ರದಡಿ 9 ನೇ ಪ್ರತಿವಾದಿಯು ದಾವಾ ಹೆಚ್ ಅನುಸೂಚಿ ಆಸ್ತಿಯನ್ನು ಖರೀದಿಸಿರುವ ವಿಷಯವು ಪ್ರತಿವಾದಿ ಸಂಖ್ಯೆ 9(ಎ) ರವರಿಗೆ

ತಿಳಿದಿರುತ್ತದೆ ಎಂದರೆ ಸರಿ. ನಿಪಿ.36 ರ ಖರೀದಿ ಪತ್ರವು ಕಾನೂನುಬಾಹಿರವಾಗಿರುತ್ತದೆ ಎಂದು ಗೊತ್ತಿದ್ದ ಕಾರಣ ಪ್ರತಿವಾದಿ ಸಂಖ್ಯೆ 9(ಎ) ರವರು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಸಮಾನ ಪಾಲು ಇದೆ ಎಂದು ಗೊತ್ತಿದ್ದರೂ ಸಹ ಅಕ್ರಮವಾಗಿ ದಾವಾ ಹೆಚ್ ಅನುಸೂಚಿ ಆಸ್ತಿಯನ್ನು ನಿಪಿ.36 ರ ಮೂಲಕ 9 ನೇ ಪ್ರತಿವಾದಿ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**